ಮಾತಾಡದೆ ತನ್ನೆಲ್ಲ ವಿಷಯಗಳನ್ನು ಮೌನವಾಗಿ ತನ್ನೊಂದಿಗೆ ಹೊತ್ತುಕೊಂಡು ಹೊರಟುಹೋಗಬಹುದು ಅನ್ನಿಸಿಬಿಟ್ಟಿತು. ಹಾಗೂ ಹೀಗೂ ಅವನ ಹಿಂದಿನ ಜೀವನದ ಬಗ್ಗೆ ಹೇಳಲು ಅವನನ್ನ ಒಪ್ಪಿಸಿದೆ. ಅಡೆಲ್ಫೊ ಕಮಿನ್ಸ್ಕಿ ತನ್ನ ಕತೆ ಹೇಳಲು ಶುರುಮಾಡಿದ...

★★★

ನನ್ನಪ್ಪ ಅಮ್ಮ ರಷ್ಯನ್ ಯಹೂದಿಗಳು. ಒಂದೆಡೆ ನಮ್ಮ ಧರ್ಮ ಮತ್ತೊಂದೆಡೆ ಬಡತನ ನಮ್ಮ ಬದುಕನ್ನು ಸದಾ ಅತಂತ್ರತೆಯ ನೆರಳಲ್ಲಿ ತಂದಿರಿಸಿತ್ತು. ನಿರಾಶ್ರಿತರ ನೋವು ನನ್ನನ್ನು ಕಲಕಲು ಕಾರಣ ನನ್ನ ಬಾಲ್ಯದ ಅನುಭವಗಳು.

ಹಲವು ವರ್ಷಗಳ ಕಾಲ ನಮ್ಮ ಇಡೀ ಕುಟುಂಬ ದೇಶದಿಂದ ದೇಶಕ್ಕೆ ನಿರಾಶ್ರಿತರಾಗಿ ಅಲೆಯಬೇಕಾಯಿತು. ಅರ್ಜೆಂಟೈನಾದಿಂದ ಮಕ್ಕಳೊಂದಿಗೆ ಫ್ರಾನ್ಸಿಗೆ ವಲಸೆ ಹೋಗಲು ನನ್ನಪ್ಪ ಅಮ್ಮ ನಿರ್ಧರಿಸಿದಾಗ ನನ್ನ ವಯಸ್ಸು ಐದು ವರ್ಷ. ಆಗಲೇ ಮೊದಲ ಬಾರಿಗೆ ನಿರಾಶ್ರಿತರಾಗಿ ವಲಸೆ ಹೋಗುವವರ ನೋವಿನ ಅನುಭವ ನನಗಾದದ್ದು. ಒಂದು ತಿಂಗಳ ಕಾಲ ಹಡಗಿನಲ್ಲಿ ಪಯಣಿಸಿದ ಮೇಲೆ. ಫ್ರಾನ್ಸಿಗೆ ಹೊರಟ ನಮ್ಮನ್ನು ಬಲವಂತವಾಗಿ ಟರ್ಕಿಯಲ್ಲಿ ನಿರಾಶ್ರಿತರಾಗಿ ಆಶ್ರಯ ಪಡೆಯಲು ಕಳಿಸಿದರು. ಅಲ್ಲಿ ಅಗತ್ಯವಿದ್ದ ಪರವಾನಗಿ ಪಡೆಯುವಷ್ಟರಲ್ಲಿ ಎರಡು ವರ್ಷಗಳುರುಳಿತ್ತು. ಆ ಪರವಾನಗಿಗೆ ತೊಡಕಾದದ್ದು ನನ್ನ ತಂಗಿ. ಅರ್ಜೆಂಟೈನಾದಿಂದ ಫ್ರಾನ್ಸಿಗೆ ಹೊರಟಾಗ ನನ್ನಮ್ಮ ಬಸುರಿ. ಟರ್ಕಿಯಲ್ಲಿ ನನ್ನ ತಂಗಿ ಹುಟ್ಟಿದಳು. ನಾವೆಲ್ಲ ಹುಟ್ಟಿದ್ದು ಅರ್ಜೆಂಟೈನಾದಲ್ಲಿ. ನಮ್ಮೆಲ್ಲರಿಗೂ ಅರ್ಜೆಂಟೈನಾದ ಪೌರತ್ವವಿತ್ತು. ಆದರೆ ಇವಳು ಅರ್ಜೆಂಟೈನಾದಲ್ಲಿ ಹುಟ್ಟಿಲ್ಲವಾದ್ದರಿಂದ ಅಲ್ಲಿನವರು ಪೌರತ್ವ ನೀಡಲು ನಿರಾಕರಿಸಿದರು. ಇತ್ತ ಟರ್ಕಿಯವರು ಅಮ್ಮ ಗರ್ಭ ಧರಿಸಿದ್ದು ತನ್ನ ದೇಶದಲ್ಲಿ ಅಲ್ಲವಾದ್ದರಿಂದ ಆ ಮಗುವಿಗೆ ತಮ್ಮ ದೇಶದ ಪೌರತ್ವ ನೀಡಲು ಸಾಧ್ಯವಿಲ್ಲವೆಂದರು. ಇದೆಂತಹ ಕಾನೂನಿನ ತೊಡಕಾಯಿತೆಂದರೆ ಅವಳು ಭೂಮಿಯ ಯಾವ ಭಾಗಕ್ಕೂ ಸೇರದ ಮಗುವಾಗಿಬಿಟ್ಟಿದ್ದಳು. ಹೀಗಾಗಿ ನಾವು ಫ್ರಾನ್ಸಿಗೆ ಹೋಗುವುದು ಕಷ್ಟವಾಯಿತು. ಅಂತೂ ಇಂತೂ ಪ್ಯಾರಿಸ್‌ಗೆ ಹೇಗೋ ಸೇರಿಕೊಂಡೆವು. ಅದೇ ಮೊದಲ ಬಾರಿಗೆ ಮನುಷ್ಯನ ಜೀವನದ ಹಣೆಬರಹವನ್ನು ಈ ದಾಖಲೆಗಳು ಹೇಗೆ ನಿರ್ಧರಿಸುತ್ತವೆ ಅನ್ನುವುದು ಅನುಭವಕ್ಕೆ ಬಂದಿತು. ಮೊದಲ ಮಹಾಯುದ್ಧದೊಂದಿಗೆ ಆರಂಭವಾದ ನಮ್ಮ ಕುಟುಂಬದ ನಿರಾಶ್ರಿತ ಪಯಣ ಎರಡನೆಯ ಮಹಾಯುದ್ಧದಲ್ಲೂ ಮುಂದುವರೆಯಿತು.

ಪ್ಯಾರಿಸ್‌ನಿಂದ ಮತ್ತೆ ಆಶ್ರಯ ಅರಸಿ ಹೊರಟ ನಾವು ತಲುಪಿದ್ದು ಸೋದರಮಾವ ಲಿಯಾನ್‌ನ ಆಶ್ರಯ ಕೋರಿ ಉತ್ತರ ಫ್ರಾನ್ಸಿನ ನಾರ್ಮೆಂಡಿ ಎನ್ನುವ ಊರಿಗೆ. ಅಲ್ಲಿಂದ ನನ್ನ ಬದುಕಿನ ಹೊಸ ಅಧ್ಯಾಯ ಆರಂಭವಾಯಿತು.

ಆ ವೇಳೆಗೆ ನನ್ನ ಹತ್ತಿರ ಇದ್ದದ್ದು ನನ್ನ ಇಡಿ ಜೀವಮಾನದ ಏಕೈಕ ಪ್ರೈಮರಿ ಸ್ಕೂಲ್ ಸರ್ಟಿಫಿಕೇಟ್. ಅದರ ಆಧಾರದ ಮೇಲೆ ಕೆಲಸ ಹುಡುಕಬೇಕಾಯಿತು. ನನಗಾಗ 14 ವರ್ಷ. ಮೊದಲಿಗೆ ಫ್ರೆಂಚ್ ಸೇನೆಯ ವಿಮಾನದ ಬಿಡಿಭಾಗಗಳ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆದರೆ ಜರ್ಮನಿಯವರು ಆ ಭಾಗವನ್ನು ವಶಪಡಿಸಿಕೊಂಡಾಗ ಯಹೂದಿ ಅನ್ನುವ ಕಾರಣದಿಂದ ನನ್ನನ್ನು ಹಾಗೂ ನನ್ನಣ್ಣನನ್ನು ಕೆಲಸದಿಂದ ಕಿತ್ತುಹಾಕಿದರು. ಮತ್ತೆ ಕೆಲಸ ಹುಡುಕಲು ಶುರುಮಾಡಿದವನಿಗೆ ಎಂ. ಬೂಸಮದ್ ಎನ್ನುವ ಕೆಮಿಕಲ್ ಎಂಜಿನಿಯರನೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕತು. ಆತನ ಹತ್ತಿರ ಅಪ್ರೆಂಟಿಸ್ ಡೈಯರ್ ಆಗಿ ಕೆಲಸಕ್ಕೆ ಸೇರಿದೆ. ಆ ಕಾರ್ಖಾನೆ 1914 – 18ರ ಯುದ್ಧದ ಯೂನಿಫಾರಂಗಳ ಖಾಕಿ ಬಣ್ಣವನ್ನು ಕಂದು ಅಥವ ಗಾಢ